‘ಓ... ಅದಕ್ಕೇನಂತೆ... ಇನ್ನೇನಾದ್ರೂ...’

ಅವಳು ತಲೆ ಅಲ್ಲಾಡಿಸಿದಳು.

‘ಕೋರ್ಟ್‌ಗೆ ಬೇಕಾದಾಗ ತಿಳಿಸ್ತೀನಿ... ಕಷ್ಟ ಆದ್ರೆ ಹೇಳಿ ಯಾರನ್ನಾದ್ರೂ ಕಳಿಸ್ತೀನಿ... ಈ ಹುಡುಗ?’

‘ನಮ್ಮೋನು.’

ಇನ್‌ಸ್ಪೆಕ್ಟರ್ ಟೇಬಲ್ ತಳಭಾಗದಲ್ಲಿ ಒತ್ತಿದ. ಹೊರಗೆ ಶಬ್ದವಾಯಿತು.

ತಕ್ಷಣ ಕಾಣಿಸಿಕೊಂಡವನಿಗೆ ‘ಮೊನ್ನೆ ತಂದು ಹಾಕಿದ್ವಲ್ಲ, ಆ ಬದ್ಮಾಶ್... ಅವನ ಹತ್ರ ಬಿಡು ಇವರನ್ನ. ಆಂ... ಹಂಗೇ ನೋಡ್ತಿರು ಮತ್ತೆ, ಗೊತ್ತಲ್ಲ’ ಎಂದ ದಪ್ಪ ದನಿಯಲ್ಲಿ.

ಒಳಗೆ ಬಂದಾಗ ಇದ್ದಂತೆ ಸರಸೂ ಸೂಟ್‌ಕೇಸ್ ಹಿಡಿದು, ನಾಗೇಂದ್ರ ಪೊಟ್ಟಣ ಹಿಡಿದು ಹೊರಟಾಗ ಆತ ಅವರು ಹಿಡಿದುಕೊಂಡಿದ್ದರ ಕಡೆಗೊಮ್ಮೆ ನೋಡಿ ಇನ್‌ಸ್ಪೆಕ್ಟರ್ ಕಡೆ ಕತ್ತು ತಿರುಗಿಸಿದ.

‘ಪರವಾಗಿಲ್ಲ ಹೋಗು.’

ಅವನು ಬಾಲಾಜಿ ಇದ್ದ ಸೆಲ್‌ಗೆ ಕರೆದುಕೊಂಡು ಹೋದ. ಬಿಳಿ ಅಂಗಿ, ಬಿಳಿ ನಿಕ್ಕರ್ ಹಾಕಿಕೊಂಡಿದ್ದ. ಗೋಡೆಗೆ ಒರಗಿ ಕುಳಿತು ಎತ್ತಲೋ ಮುಖ ಮಾಡಿದ್ದ ಅವನು ಸೆಲ್‌ನ ಬಾಗಿಲು ಬಳಿ ಶಬ್ದವಾದದ್ದು ಕೇಳಿ ಎದ್ದು ನಿಂತ.

ಒಳಗೆ ಬೆಳಕು ಅಷ್ಟಿಲ್ಲದಿದ್ದರೂ ಬಂದವರು ಯಾರೆಂದು ಅವನಿಗೆ ತಿಳಿಯಿತು. ಮುಖ ಪಕ್ಕಕ್ಕೆ ತಿರುಗಿಸಿದ. ನಿಂತಲ್ಲಿಂದ ಕದಲಲಿಲ್ಲ. ಸರಸೂ ಎರಡು ಕ್ಷಣ ಕಣ್ಣು ಮುಚ್ಚಿ ತೆರೆದಳು. ಅವನು ಹಾಗೆಯೇ ಇದ್ದ. ಅವಳು ಉಕ್ಕೇರುತ್ತಿದ್ದ ಮಿಶ್ರಣ ಭಾವಗಳನ್ನು ನಿಗ್ರಹಿಸಿ ತಡೆಹಿಡಿದರೂ ಪ್ರಯತ್ನ ಮೀರಿ ಕಣ್ಣು ಮಂಜಾದವು. ಅವಳಿಗರಿವಿಲ್ಲದೇ ಉಗುಳು ನುಂಗಿದಳು. ಅವಳು ತನ್ನದೆಲ್ಲವನ್ನೂ ಬಿಟ್ಟುಕೊಟ್ಟಿದ್ದಳು. ನಾಗೇಂದ್ರನಿಗೆ ಎಲ್ಲವೂ ಹೊಸತು. ಅವನಿಗೇನು ಮಾಡಬೇಕೆಂದೇ ತಿಳಿಯಲಿಲ್ಲ. ಸ್ವಲ್ಪವೂ ಪ್ರಯತ್ನವಿಲ್ಲದೆ ಎಂದೂ ಕಾಣದ ಹಲವು ವಿಷಯಗಳು ಅವನೊಳಗೆ ಸೇರುತ್ತಿದ್ದವು. ಪ್ರಾರಂಭದಲ್ಲಿ ತುಂಬ ಬಿಗಿಯಾಗಿದ್ದವನು ಒಂದಷ್ಟು ಸಡಿಲವಾದ. ಬಾಗಿಲಿನ ಸರಳಿನ ಮೇಲೆ ಕೈ ಆನಿಸಿದ. ಸರಸೂ ಅದಕ್ಕೊರಗಿದಳು.

ಜೊತೆಗೆ ಬಂದ ಪೇದೆ, ‘ನಿನ್ನ ನೋಡಕ್ಕೆ ಬಂದಾರೆ... ಬಾ’ ಎಂದ.

ಬಾಲಾಜಿ ಬಾಗಿಲು ಕಡೆಗೆ ಹೆಜ್ಜೆ ಇಡುತ್ತಿದ್ದಂತೆ ಮುಖ ಹೆಚ್ಚು ಸ್ಪಷ್ಟವಾಗತೊಡಗಿತು. ಕೈಚಾಚಿದರೆ ಸಿಗುವಷ್ಟು ಹತ್ತಿರ ಬಂದು ನಿಂತ. ಮುಖ ಕೆಳಗೆ ಹಾಕಿದ್ದ.

ಸರಸೂ ನಾಗೇಂದ್ರನ ಕೈಯಲ್ಲಿದ್ದ ಮೈಸೂರ್‌ಪಾಕ್ ಪೊಟ್ಟಣ ತೆಗೆದುಕೊಂಡು, ಬಿಚ್ಚಿ, ಮುಷ್ಟಿಗೆ ಸಿಗುವಷ್ಟು ಹಿಡಿದು ಅವನು ಮುಖದ ಕಡೆ ಚಾಚಿದಳು. ಅವನು ಸುಮ್ಮನಿದ್ದ.

‘ತೊಗೋ...’ ಅವಳು ಸ್ವಲ್ಪ ಗಟ್ಟಿಯಾಗಿಯೇ ಹೇಳಿದಳು.

ವಿಚಿತ್ರ ಬಲವಂತಕ್ಕೆ ಒಳಗಾದವನಂತೆ ಅವನು ಇನ್ನಷ್ಟು ಬಳಿಗೆ ಸರಿದ. ನಾಗೇಂದ್ರ ಮತ್ತು ಆತ ನೋಡುತ್ತಲೇ ಇದ್ದರು. ಸರಸೂ ಎಡಗೈಯಿಂದ ಅವನ ಬಾಯಗಲಿಸಿ ಮುಷ್ಟಿಯಲ್ಲಿ ಇದ್ದದ್ದನ್ನು ತುರುಕಿದಳು. ಮರುಕ್ಷಣ ಇಡೀ ಪೊಟ್ಟಣವನ್ನು ಅವನ ಮುಖಕ್ಕೆ ಎಸೆದಳು. ಹಠಾತ್ ಆಘಾತದಿಂದ ಅವನು ಮುಖವೆತ್ತಿದ. ಸರಸೂ ತನ್ನೆಲ್ಲ ಶಕ್ತಿಯನ್ನು ಒಗ್ಗೂಡಿಸಿ ‘ಫಳಾರ್, ಫಳಾರ್’ ಎಂದು ಕೆನ್ನೆಗೆ ಬಿಗಿಯುತ್ತಲೇ ಇದ್ದಳು. ಅವನು ಪಕ್ಕಕ್ಕೆ ವಾಲಿದ. ಅವಳೇನು ಮಾಡುತ್ತಿದ್ದಾಳೆ ಎಂದು ಉಳಿದವರಿಗೆ ತಿಳಿಯುವ ಮುಂಚೆ ಸೂಟ್‌ಕೇಸ್ ತೆಗೆದು